## 12

# ಶಪಿಸಲ್ಪಟ್ಟಂತ ಮನುಷ್ಯನ ಜೀವಿತ

## (2 ಅರಸು 4:14, 27, 29, 42, 43; 5:5, 10, 14-16, 19-27; 6:15; 8:4, 5)

ನಾಮಾನನ ವಾಸಿಯಾಗುವಿಕೆಯ ಅನೇಕ ವಿಷಯಗಳು (ವಿವರವಾದ ವ್ಯಾಪ್ತಿಯನ್ನು ಒಳಗೊಂಡು) ಗಮನ ಸೆಳೆಯುವಂತಹದ್ದಾಗಿದೆ. 2 ಅರಸು 5ನೇಯ ಸಂಪೂರ್ಣ ಅಧ್ಯಾಯವು ಈ ಘಟನೆಗೆ ಮೀಸಲಾಗಿದೆ. ಈ ಕಥೆಗಾಗಿ ಎರಡು ಪಾಠಗಳನ್ನು ನಾವು ಮೀಸಲಾಗಿಟ್ಟಿದ್ದೇವೆ. ಆದರೆ ಇನ್ನೂ ಒಂದು ಉಳಿದಿದೆ; ಗೇಹಜಿಯ ಪ್ರಕರಣವನ್ನು ಕೇಂದ್ರ ವಾಗಿಟ್ಟುಕೊಂಡ ಕಥೆ. ಅಧ್ಯಾಯ 5 ನಾಮಾನ ಮತ್ತು ಗೇಹಜಿ ವ್ಯತ್ಯಾಸದ ಅಭ್ಯಾಸವೆನ್ನ ಬಹುದು. "ನಾಮಾನ ಕಥೆಯು ಕುಷ್ಠರೋಗದಿಂದ ಪ್ರಾರಂಭವಾಗಿ ಮತ್ತು ಯೆಹೋವನ ಸೇವಕನಾಗುವುದರ ಮೂಲಕ ಕೊನೆಗೊಳ್ಳುವುದಾಗಿದೆ. ಆದರೆ ಗೇಹಜಿಯ ಕಥೆಯ ಸೇವಕನಾಗಿ ಪ್ರಾರಂಭವಾಗಿ ಕುಷ್ಠದಲ್ಲಿ ಅಂತ್ಯಗೊಳ್ಳುತ್ತದೆ."[1]

### ಗೇಹಜಿಯ ಲಕ್ಷಣಗಳು (4:14, 27, 29, 42, 43; 6:15; 8:4, 5)

ಗೇಹಜಿ ಎಂಬ ಹೆಸರಿನ ಅರ್ಥವು "ದರ್ಶನದ ಕೊಳ್ಳ"[2] ಎಂದಿದೆ. ಅದನ್ನೂ ಮೀರಿ, ಗೇಹಜಿಯ ಬಗೆಗೆ ಯಾವ ಹಿನ್ನಲೆಯೂ ನಮಗೆ ಸಿಕ್ಕದು. ಆತನು ಎಲ್ಲಿ ಮತ್ತು ಯಾವಾಗ ಎಲೀಷನ ಸೇವೆಮಾಡುವುದಕ್ಕಾಗಿ ಆರಂಭಿಸಿದನೋ ನಾನರಿಯೆನು. ಒಂದು ಸಾಧ್ಯತೆಯೆಂದರೆ ಎಲೀಷನು ಆತನನ್ನು ಒಂದು ಪ್ರವಾದಿ ಮಂಡಲಿಯೊಳಗಿಂದ ಆರಿಸಿಕೊಂಡು ಬಂದಿದ್ದನು. ಆ ವಿದ್ಯಾರ್ಥಿಗಳಲ್ಲಿ ಆತನು ಅತೀ ಚುರುಕಾದ ಮತ್ತು ಜ್ಞಾನವಂತನಾದ ವಿದ್ಯಾರ್ಥಿಯಾಗಿರಬಹುದು. ಯಾವುದೇ ಸಂದರ್ಭದಲ್ಲಿ ಜೀವಿತದ್ದುದ್ದಕ್ಕೂ, ಎಲೀಷನೊಡನೆ ಪ್ರಯಾಣ ಮತ್ತು ಎಲೀಷನು ಎಲೀಯನಿಂದ ಕಲಿತಂಹವುಗಳನ್ನು ಕಲಿಯುವಂತಹ ಅವಕಾಶಗಳು ಆತನಿಗೆ ಕೊಡಲ್ಪಟ್ಟಿದ್ದವು. ಒಂದು ವೇಳೆ ಗೇಹಜಿಯು ಇಂತಹ ಅವಕಾಶಗಳ ಪೂರ್ಣ ಪ್ರಯೋಜನವನ್ನು ಪಡೆದದ್ದೇ ಆದರೆ, ನಾವು ಇಂದು ಇಸ್ರಾಯೇಲಿನ ಉತ್ತರ ರಾಜ್ಯದ *ಮೂವರು* ದೊಡ್ಡ ಪ್ರವಾದಿಗಳ ಬಗೆಗೆ ಮಾತನಾಡಬಹುದಿತ್ತು ಎಲೀಯ, ಎಲೀಷ ಮತ್ತು ಗೇಹಜಿ.

ಹೀಗೆ ನಮ್ಮ ಅಧ್ಯಯನದಲ್ಲಿ, ನಾವು ಗೇಹಜಿಯಲ್ಲಿ ಸಾಮರ್ಥ್ಯವನ್ನು ಕಾಣುತ್ತೇವೆ. ಗೇಹಜಿಯು ಆಳವಾದ ನೋಟವು ಶೂನೇಮ್ಯ ಸ್ತ್ರೀಯ ಮಗನ ಇಚ್ಚೆಯನ್ನು ಪ್ರಕಟಿಸುವಲ್ಲಿ ಕಂಡುಬರುತ್ತದೆ (4:14). ತನ್ನ ಜನರಲ್ಲಿ ಹುಡುಗನೊಬ್ಬ ಸತ್ತಾಗ ಎಲೀಷನು ಆತನಿಗೆ ಅದನ್ನು ವಹಿಸಿಕೊಡುವಲ್ಲಿ ಗೇಹಜಿಯ ಪ್ರಮಾಣಿಕತೆಯು ಇಲ್ಲಿ ತೋರಿಬರುವದು (4:29). ಗೇಹಜಿಯ ಪ್ರಾಖ್ಯಾತಿಯು ಅವನು ತನ್ನ ಒಡೆಯನ ಬಗೆಗೆ ಕೊಡುವ ರಾಜಾಜ್ಞೆಯಲ್ಲಿ ಪ್ರಮಾಣಿಕೃತವಾ ಗುತ್ತದೆ (8:4, 5).

ಅದೇ ಸಮಯದಲ್ಲಿ, ಆತ್ಮೀಕವಾದ ಅಪ್ರಬುದ್ಧತೆಯು ಇದರ ಮೂಲಕ ಕೆಲಸಾರಿ ಕಂಡುಬರುತ್ತದೆ. ಗೇಹಜಿಯು ಒಬ್ಬ ದುಃಖಿತ ತಾಯಿಯನ್ನು ಅಲ್ಲಗಳೆಯಲೂ ಸಿದ್ಧನಿದ್ದನು (4:27). ಅಲ್ಪ ಆಹಾರದಿಂದ ನೂರು ಜನರಿಗೆ ಊಟಕೊಡಲು ಹೇಳಲ್ಪಟ್ಟಾಗ ಬಹುಶಃ ಗೇಹಜಿಯು ಸಂಶಯಿತನಾಗಿರಬಹುದು (4:42, 43). ಅರಾಮ್ಯರ ಸೈನ್ಯವು ಸುತ್ತುವರೆ

ದದ್ದನ್ನು ಕಂಡಾಗ ಗೇಹಜಿಯು ಭಯದಿಂದ ದುರ್ಬಲನಾಗಿರಬಹುದು (6:15).[3]

ಹೇಗೋ, ಗೇಹಜಿಯ ಎಲ್ಲಾ ಸಂಗತಿಗಳು ಕ್ಷಮಿಸಲ್ಪಟ್ಟವು ಮತ್ತು ಮರೆಯಲ್ಪಟ್ಟವು. ಆತನ ವಿಫಲತೆಗಳು ದೊಡ್ಡ ಆತ್ಮೀಕ ನಾಯಕರುಗಳಾಗುವುದಕ್ಕೆ ಹೊರಟಂಥಹ ಯೇಸುವಿನ ಶಿಷ್ಯರಾದ ಅಪೊಸ್ತಲರಿಗಿಂತ ದೊಡ್ಡದೇನಲ್ಲ. ಗೇಹಜಿಯ ಹಣಬರಹವು ಕೆಲ ಸಂಕಟಮಯ ಪರೀಕ್ಷೆಯ ಪರಿಣಾಮದಲ್ಲಿ ಕಣಕ್ಕಿಳಿಯಿತು ಇದರಿಂದ ಈ ಸೇವಕನು ವಿಫಲನಾಗಿ ತಿರಸ್ಕೃತನಾದನು.

## ಗೇಹಜಿಯ ಪರೀಕ್ಷೆ (5:5, 10, 14-16, 19-26)

**ಅನುಕಂಪದ ಪರೀಕ್ಷೆ**

ಗೇಹಜಿಯ ಮೊದಲ ಕಠಿಣವಾದ ಪರೀಕ್ಷೆ ಎಂದರೆ ಅನುಕಂಪದ ಪರೀಕ್ಷೆ. ಹಿಂದಿನ ಪಾಠದಲ್ಲಿ ನಾನು ಸೂಚಿಸುವುದೇನೆಂದರೆ ನಾಮಾನನು ಯೊರ್ದನ್ ಹೊಳೆಗೆ ಹೋಗಿ ಮುಳುಗುವ ಸಂದೇಶವನ್ನು ಎಲೀಷನು ತನ್ನ ದೂತನ ಮುಖಾಂತರ ಕಳುಹಿಸಿದ್ದನು (5:10). ಮನೆಯಿಂದ ಹೊರಬಂದಾಗ ಕಣ್ಣುಕೋರೈಸುವ ಸಂಪತ್ತು ಗೇಹಜಿಯ ಕಣ್ಣಿಗೆ ಕಂಡದ್ದನ್ನು ನೀವು ಊಹಿಸಿಕೊಳ್ಳಿರಿ. ನಾಮಾನನ ಸೇವಕರ ಕೈಯಲ್ಲಿರುವಂತಹ ಬೆಳ್ಳಿ, ಬಂಗಾರ, ಮತ್ತು ಮೌಲ್ಯಯುತವಾದ ಬಟ್ಟೆಗಳನ್ನು ನೋಡಿದಾಗ ಆತನ ಹೃದಯಬಡಿತವು ಬಹುಶಃ ಹೆಚ್ಚಾಗಿರಬಹುದು (5:5). ಎಲ್ಲಾ ಸಂಪತ್ತು ಮೂಟೆಕಟ್ಟಿ ಅವರ ವಾಹನದ ಮೇಲೆ ಹಾಕಲ್ಪಟ್ಟವು ಮತ್ತು ನಾಮಾನನ ಜನರ ಯಾತ್ರೆಯು ಪೂರ್ವಕ್ಕೆ ಯೊರ್ದನ್ನಿನತ್ತ ಹೊರಟಾಗ ಬಹುಶಃ ಆತನು ಬಹುವಾಗಿ ನಿರಾಸೆಗೊಂಡನು.

ನಾಮಾನನು ಕೆಲದಿನಗಳಲ್ಲಿ ಸಂಪತ್ತಿನೊಡನೆ ತಿರುಗಿ ಬಂದುದು ತಿಳಿಗಿ ಆತನಿಗೆ ಸಂತಸವನ್ನು ಉಂಟುಮಾಡಿತ್ತು (5:15). ಹೇಗೋ, ಆ ಯೋಧನು ಅದನ್ನು ಎಲೀಷನಿಗೆ ಒತ್ತಾಯಿಸುತ್ತಿದ್ದಾಗ ಆ ಪ್ರವಾದಿಯು ಅದನ್ನು ನಿರಾಕರಿಸಿದಾಗ ಗೇಹಜಿಯು ದಿಗ್ಭ್ರಾಂತನಾದನು (5:16ಎ). ಗೇಹಜಿಯ ವಿಚಾರಗಳನ್ನು ನಾನು ಊಹಿಸಿಕೊಳ್ಳಬಲ್ಲೆ: “ಬಹುಮಾನಕ್ಕೆ ಯಾರಾದರೋ ಯೋಗ್ಯರಾದಾಗ, ನಾವು ಅದನ್ನು ಮಾಡುತ್ತೇವೆ - ನಾವು ಮಾಡುವದಕ್ಕಿಂತ ಹೆಚ್ಚಾಗಿ ಯಾರೊಬ್ಬರೂ ಸಹಾಯದ ಅವಶ್ಯಕತೆಯು ಇಲ್ಲ. ನಮ್ಮ ಖಜಾನೆಯು ಬರಿದಾಗಿದೆ ಮತ್ತು ಎಲೀಷನು ಹೊಸ ನಿಲುವಂಗಿಯನ್ನು ಧರಿಸಬಹುದು. ಹಾಗೆ ನೋಡಿದರೆ ನನಗೂ ಕೂಡಾ! ಅದರ ಜೊತೆಯಲ್ಲಿ ಪ್ರವಾದಿ ಮಂಡಲಿಯ ಅವಶ್ಯಕತೆಗಳೇನು? ಈ ಬಂಜರುಭೂಮಿಗೆ 80,000 ಡಾಲರುಗಳು ಏನೂ ಅಲ್ಲ ಎಂಬುದಂತೂ ಖಚಿತ, ಆದರೆ ಇನ್ನು ವಿನಿಯೋಗಿಸಿ ನಾವು ಏನೆಲ್ಲಾ ಮಾಡಬಹುದು! ನನ್ನ ಒಡೆಯನ ಯೋಚನೆ ಏನಾಗಿರಬಹುದು?” ಹೇಗೋ, ಎಲೀಷನು ಆ ವಿಷಯದಲ್ಲಿ ಆಚಲನಾಗಿದ್ದನು (15:16ಬಿ), ಹಾಗಾಗಿ ನಾಮಾನನ ಪರಿವಾರವು ಹೊರಟು ಹೋಯಿತು (5:19ಬಿ).

ಆ ಜನಶ್ರೇಣಿಯು ಹೊರಟು ಹೋಗುವುದನ್ನು ನೋಡುತ್ತಿದ್ದ ಗೇಹಜಿಯ ಹೃದಯದಲ್ಲಿ ಇದ್ದುದನ್ನು ಲೇಖಕನು ಹೀಗೆ ಪ್ರಕಟಿಸುತ್ತಾನೆ: “ನನ್ನ ಯಜಮಾನನು ಆ ಅರಾಮ್ಯನಾದ ನಾಮಾನನಿಂದ ಏನೂ ತೆಗೆದುಕೊಳ್ಳದೆ ಅವನನ್ನು ಹಾಗೆಯೇ ಕಳುಹಿಸಿಬಿಟ್ಟನಲ್ಲಾ” (5:20ಎ) “ಹಾಗೆಯೇ” ಎಂಬ ಪದವನ್ನು ಗಮನಿಸಿರಿ. “ಅರಾಮ್ಯನಾದ ನಾಮಾನನನ್ನು ಹಾಗೆಯೇ [ಏನೂ ತೆಗೆದುಕೊಳ್ಳದೇ] ಕಳುಹಿಸಿಬಿಟ್ಟನಲ್ಲಾ.” ಗೇಹಜಿಗೆ ನಾಮಾನನು ಇನ್ನೂ ಆತನು ದ್ವೇಷಿಸುತ್ತಿದ್ದ ವಿರೋಧಿಸುತ್ತಿದ್ದ ವೈರಿಯಾಗಿದ್ದನು. ಆತನು “ಚಿಕ್ಕ ಯೆಹೂದಿ ಹುಡಿಗಿಯನ್ನು ಅಪಹರಣ ಮಾಡಿದವನು ಮತ್ತು ಕುಷ್ಠರೋಗಿಗಳನ್ನು ಅತಂತ್ರರನ್ನಾಗಿ ಬಿಟ್ಟು ಬಿಟ್ಟವನು ಮತ್ತು ಸಾಯಲು ಬಿಟ್ಟವನು ಆಗಿದ್ದನು.”[4] ಗೇಹಜಿಯ ಮನದಲ್ಲಿ, ನಾಮಾನನಿಗೆ ಶಿಕ್ಷೆಗೆ ಅರ್ಹನಾದ ವ್ಯಕ್ತಿಯಾಗಿದ್ದನು; ಎಲೀಷನು ಆತನು ಕೊಡಲು ತಂದಿದ್ದ ಎಲ್ಲವನ್ನೂ

ತೆಗೆದುಕೊಳ್ಳುವದು ನ್ಯಾಯವಾಗಿತ್ತು, ಇನ್ನೂ ಹೆಚ್ಚಿನದನ್ನು ಕೇಳಬೇಕಿತ್ತು. ಬದಲಾಗಿ, ಪ್ರವಾದಿಯು (ನಾವು ಹೇಳುವಂತೆ) "ಸರಳವಾಗಿ ಏನೂ ತೆಗೆದುಕೊಳ್ಳದೇ ಬಿಟ್ಟುಬಿಟ್ಟನು."

ಗೆಹೆಜಿಯು ಕರುಣೆಯ ಪರೀಕ್ಷೆಯಲ್ಲಿ ಸೊತುಹೋದನು. ಈ ಕಥೆಯಲ್ಲಿ ನಮ್ಮ ಉದ್ದೇಶವು, ಯೆಹೂದಿ ಜನರು ತಮ್ಮ ಜೀವಿತದಲ್ಲಿ ಕಷ್ಟದಲ್ಲಿರುವವರು ಯಾರೇ ಆಗಿರಲಿ ಅಥವಾ ಅವರು ಯಾವುದೇ ರಾಷ್ಟ್ರದವರಾಗಲಿ ಅವರ ಬಗ್ಗೆ ಕರುಣೆಯನ್ನು ಹೊಂದಿದವ ರಾಗಿರುತ್ತಿದ್ದರು ಎಂಬುದರಲ್ಲಿ ಸಂಶಯವಿಲ್ಲ. ಹೇಗೋ, ಯೆಹೂದಿಗಳು ಈ ಪಾಠವನ್ನು ಕಲಿಯಲು ಕಠಿಣ ಶ್ರಮಪಟ್ಟರು (ಲೂಕ 4:27, 28). ಹೊಸ ಒಡಂಬಡಿಕೆಯಲ್ಲಿ, ಯೇಸು ದೇವರು ಕರುಣೆಯನ್ನು ಬಯಸುವವನಾಗಿದ್ದಾನೆ ಎಂದು ಒತ್ತಿಹೇಳಿದ್ದಾನೆ (ಮತ್ತಾಯ 9:13). ಆಗಾಗ ಅದು ತಿರುಗಿ ಯೇಸು ತಾನೇ "ಕರುಣೆಪಟ್ಟನು" (ಮತ್ತಾಯ 20:34; ಮಾರ್ಕ 1:41) ಎಂದು ಹೇಳುತ್ತದೆ. ಪೌಲನು ಹೀಗೆ ಬರೆಯುತ್ತಾನೆ. "ಹೀಗಿರಲಾಗಿ, ನೀವು ದೇವರಾರಿಸಿಕೊಂಡವರೂ ಪ್ರತಿಷ್ಠಿತರೂ ಪ್ರೀಯರೂ ಆಗಿರುವುದರಿಂದ ಕನಿಕರ ದಯೆ ... ಸದ್ಗುಣಗಳನ್ನು ಧರಿಸಿಕೊಳ್ಳಿರಿ" (ಕೊಲಸ್ಸೆ 3:12).

ಲೂಕ 10 ರಲ್ಲಿ ಯೇಸು ಕರುಣೆಯ ಪರೀಕ್ಷೆಯ ಅನುಭೂತಿಯಲ್ಲಿ ಹಾದುಹೋದ ಮತ್ತು ಅದರಲ್ಲಿ ವಿಫಲರಾದ ಯಾಜಕ ಮತ್ತು ಲೇವಿಯರ ಬಗೆಗೆ ಹೇಳುತ್ತಾನೆ (ವಚನಗಳು 30:32). ಅದೇ ರೀತಿಯಲ್ಲಿ ಹಾದುಹೋದ ಒಬ್ಬ ಸಮಾರ್ಯದವನ ಬಗೆಗೆ ಹೇಳುತ್ತಾನೆ (ವಚನಗಳು 33-35). ನಾನೂ ಮತ್ತು ನೀನು ಈ ರೀತಿಯ ಕರುಣೆಯ ಪರೀಕ್ಷೆಯಲ್ಲಿ ಪ್ರತಿನಿತ್ಯ ಹಾದುಹೋಗುತ್ತೇವೆ; ನಾವು ಅದರ ಅವಶ್ಯಕತೆಯನ್ನು ಹೊಂದಿದ ಜನರನ್ನು ಸುತ್ತಲೂ ಹೊಂದಿದ್ದೇವೆ. ನಾವು ಸ್ವಾರ್ಥಿಗಳಾಗಿ "ವಾರೆಯಾಗಿ ಹೋಗದಂತೆ" ನಮ್ಮ ದೇವರು ನಮಗೆ ಸಹಾಯ ಮಾಡಲಿ, ಮತ್ತು ಸಹಾಯಕವಾಗುವ ರೀತಿಯಲ್ಲಿ ಪ್ರೀತಿಪೂರ್ವಕವಾಗಿ ಅವಶ್ಯಕತೆಯುಳ್ಳವರಿಗೆ ಪ್ರತಿಕ್ರಿಯಿಸಬೇಕು (ಗಲಾತ್ಯ 6:10; ಎಫೆಸ 4:28).

## ಪ್ರಾಮಾಣಿಕತೆಯ ಪರೀಕ್ಷೆ

ಎಲೀಷನು ಒಂದು ವೇಳೆ ನಾಮಾನನ ಸಂಪತ್ತನ್ನು ತೆಗೆದುಕೊಳ್ಳದಿದ್ದರೂ ತಾನು ತೆಗೆದುಕೊಳ್ಳಬೇಕೆಂದು ಗೇಹಜಿಯು ನಿರ್ಧರಿಸಿದನು. "ಯೆಹೋವನಾಣೆ, ನಾನು ಅವನ ಹಿಂದೆ ಓಡುತ್ತಾ ಹೋಗಿ ಅವನಿಂದ ಸ್ವಲ್ಪವನ್ನಾದರೂ ಬಾಚಿಕೊಂಡು ಬರುವೆನು" (2 ಅರಸುಗಳು 5:20) ಎಂದು ಆತನು ಯೋಚಿಸಿದನು. ಗೇಹಜಿಯು "ಯೆಹೋವನಾಣೆ" ಎಂದು ಕೈ ಕೊಳ್ಳುವ ಪ್ರತಿಜ್ಞೆಯು (ಇದನ್ನು ವಚನ 16 ರೊಂದಿಗೆ ಹೋಲಿಸಿರಿ) ಗಲಿಬಿಲಿ ಹುಟ್ಟಿಸುವಂತದ್ದಾಗಿದೆ. ಆತನು ದೇವರ ಪವಿತ್ರವಾದ ಪರಿಶುದ್ಧ ಹೆಸರಿನ ಮೇಲೆ ತನ್ನ ಸುಳ್ಳಿಗಾಗಿ ಮತ್ತು ಮೋಸ ಕ್ಕಾಗಿ ಪ್ರಾರ್ಥಿಸುತ್ತಿದ್ದಾನೆ. ಇಂದಿನ ದಿನಗಳಲ್ಲಿ ತಮ್ಮ ಅಲ್ಪದರ ಜೊತೆಯಲ್ಲಿ ಭಾಷಣಗಳನ್ನು ಗುರುತಿಸಿಕೊಳ್ಳಲು ಅಥವಾ ಪವಿತ್ರವಾದ ಹೆಸರಿಗೆ ಯಾವುದೇ ಗೌರವವನ್ನು ಕೊಡದೆ ಪವಿತ್ರ ಹೆಸರನ್ನು ಉಪಯೋಗಿಸುತ್ತಿರುವುದನ್ನು ನಾನು ನೆನಿಪಿಸಿಕೊಳ್ಳುತ್ತೇನೆ. "ದೇವರ ಹೆಸರು ಪವಿತ್ರವಾದದ್ದು [ಪವಿತ್ರವಾಗಿ ಇಡಲ್ಪಟ್ಟದ್ದು] ಆಗಿದೆ" (ಮತ್ತಾಯ 6:9; ಎಬಿ); ಇದು ಹಗುರ ವಾಗಿ ಮಾತಾನಾಡುವುದಕ್ಕೂ ಮತ್ತು ಕ್ಷುಲ್ಲಕವ ಾಗಿಯೂ ಉಪಯೋಗಿಸಕ್ಕದ್ದಲ್ಲ (ನೋಡಿರಿ ವಿಮೋಚನಾಕಾಂಡ 20:7).

ನಾಮಾನನ ಪರಿವಾರವು ಈಗಾಗಲೆ ಅಲ್ಲಿಂದ ಹೊರಟುಬಿಟ್ಟಿತ್ತು (2 ಅರಸು 5:19ಬಿ); ಆದರೆ ಅದು ದೊಡ್ಡ ಗುಂಪಾಗಿದ್ದರಿಂದ, ಕೆಲವೇ ಅಡಿಗಳ ಅಂತರದಲ್ಲಿ ಅವರು ನಿಧಾನವಾಗಿ ಪ್ರಯಾಣಿಸುತ್ತಿರಬಹುದು. ಒಂದು ವೇಳೆ ಗೇಹಜಿಯು ಓಡುತ್ತಾ ಹೋದದ್ದಾದರೆ ಅವರನ್ನು ಮುಟ್ಟಬಹುದಿತ್ತು. "ಗೇಹಜಿಯು ಹಾಗಂದುಕೊಂಡು ಹೊರಟನು" (5:21ಎ).

ಗೆಹೆಜಿಯು ತಮ್ಮ ಹಿಂದೆ ಓಡಿಬರುತ್ತಿದ್ದುದನ್ನು ನಾಮಾನು ನೋಡಿದನು ಮತ್ತು ತನ್ನ ರಥವನ್ನು ನಿಲ್ಲಿಸಿದನು. ವಚನ 21ಬಿ ಹೇಳುತ್ತದೆ "ಆತನು ರಥದಿಂದ ಇಳಿದು ಅವನನ್ನು

ಎದುರುಗೊಂಡನು'' ಎಂದು. ಈ ಪ್ರಸಿದ್ಧನಾದ ಮನುಷ್ಯನಲ್ಲಿಯ ಈ ನಾಟಕೀಯ ಬದಲಾವಣೆಯ ಮತ್ತೊಂದು ನಿದರ್ಶನವು ಇಲ್ಲಿದೆ. ಆತನ ಯೊರ್ದನ್ನಿನ ಅನುಭವಕ್ಕಿಂತ ಮುಂಚೆ, ಅವುಗಳು "ಅವನ ಅಡಿಯಲ್ಲಿರುವವು'' ಎಂದು ಯೋಚಿ ಸುತ್ತಿದ್ದವನು ಆತನು ರಥದಿಂದ ಇಳಿದು ಸೇವಕನಿಗೆ ಬೊಗ್ಗಿ ವಂದಿಸುತ್ತಿದ್ದಾನೆ.

ಚಿಂತೆಗೀಡಾದ ದಂಡನಾಯಕನು ಆತನ ಮುಖವನ್ನು ನೋಡುತ್ತಾ ಕೇಳಿದನು "ಕ್ಷೇಮವೋ?'' ಎಂದು (5:21ಎ). ಗೇಹಜಿಯು ಕಷ್ಟದ ಓಟದ ನಂತರದ ಉಸಿರನ್ನು ಹಿಡಿದಿಟ್ಟುಕೊಳ್ಳಲು ಪ್ರಯತ್ನಿಸುತ್ತಿರುವದನ್ನು ನಾನು ಇಲ್ಲಿ ಕಾಣುತ್ತಿದ್ದೇನೆ. ಅಂತಿಮವಾಗಿ ಆತನು ಉತ್ತರಿಸಲು ಸಮರ್ಥನಾದನು "ಕ್ಷೇಮ'' (5:22ಎ).[5] ನಂತರ ಹುಷಾರಿನಿಂದ ಕುಶಲವಾದ ಸುಳ್ಳಿನ ಸರಣಿಯು ಸೇವಕನ ತುಟಿಯಿಂದ ಹೊರಬಂದಿತು:

ಸುಳ್ಳು 1: "ನನ್ನ ಯಜಮಾನನು ನನ್ನನ್ನು ನಿನ್ನ ಬಳಿಗೆ ಕಳುಹಿಸಿದ್ದಾನೆ'' (5:22ಬಿ).

ಸುಳ್ಳು 2: (ಎಲೀಷನು ನಿನಗೆ ಹೀಗೆ ಹೇಳು ಎಂದು ಹೇಳಿದ್ದಾನೆ), "ಎಫ್ರಾಯಿಮ್ ಪರ್ವತಪ್ರದೇಶದಿಂದ ಪ್ರವಾದಿ ಮಂಡಲಿಯವರಾದ ಇಬ್ಬರು ಯೌವನಸ್ಥರು ಬಂದಿರುತ್ತಾರೆ'' (5:22ಸಿ). (ಈ ಊಹಾತ್ಮಕವಾದ ಯೌವನಸ್ಥರು ಬೇತೇಲಿನ ಪ್ರವಾದಿ ಮಂಡಲಿಯವರಿರಬೇಕು.)

ಸುಳ್ಳು 3: "ಅವರಿಗೋಸ್ಕರ ಒಂದು ತಲಾಂತು ಬೆಳ್ಳಿಯನ್ನೂ ಎರಡು ದಸ್ತು ಬಟ್ಟೆಗಳನ್ನೂ ತೆಗೆದುಕೊಂಡು ಕೊಡಬೇಕು'' (5:22ಡಿ). (ಗೇಹಜಿಯು ಬಹುವಾಗಿ ಆಶಿಸಿರಬೇಕು, ಆದರೆ ನಂಬಬಹುದಾದ ಕಥೆಯನ್ನು ಹೇಳುವ ಅವಶ್ಯಕತೆಯು ಇರುವ ಕಾರಣ ಆತನ ದುರಾಶೆಯು ಮಾರ್ಪಟನ್ನು ಹೊಂದಿತ್ತು.)

ಗೇಹಜಿಯ ಮೇಲೆ ಸಂಶಯ ಪಡಲು ನಾಮಾನನಿಗೆ ಯಾವ ಕಾರಣಗಳೂ ಇರಲಿಲ್ಲ ಮತ್ತು ಬಹುಶಃ ಆತನು ಆ ಭಿನ್ನಹದಿಂದ ಸಂತುಷ್ಟನಾದನು. ಆತನ ಪ್ರಶಂಸೆಯನ್ನು ವ್ಯಕ್ತಪಡಿಸಲು ಸಮಂಜಸವಾದ ಮಾರ್ಗವನ್ನು ಇದು ಮಾಡಿಕೊಟ್ಟಿತು. ಗೇಹಜಿಯು ಕೇಳುತ್ತಿರುವದು ಒಂದು ತಲಾಂತು, ಆದರೆ ನಮಾನನು ಆತನಿಗೆ ಎರಡು ತಲಾಂತನ್ನು ತೆಗೆದುಕೊಳ್ಳಲು ಒತ್ತಾಯಿಸಿದನು (5:23ಎ). ಸೇವಕನು ಈ ಪ್ರಸ್ತಾವನೆಯಿಂದ ಸಂತಸಗೊಂಡನು, ಆದರೆ ಪೌರಾತ್ಯ ಸಂಪ್ರದಾಯದಂತೆ ಆತನು ನಿರಾಕರಿಸಬೇಕಿತ್ತು. ನಾಮಾನನು ತನ್ನ ಆಚರಣೆಯ ಮತ್ತು "ಆತನನ್ನು ಒತ್ತಾಯಿಸುವಲ್ಲಿ''[6] ತನ್ನ ಪಾತ್ರವನ್ನು ಮಾಡಿದನು (5:23ಬಿ). ಎಲ್ಲಾ ಔಪಚಾರಿಕ ಕಾರ್ಯಗಳು ಮುಗಿದ ಮೇಲೆ ಗೇಹಜಿಯು "ಮನಸ್ಸಿಲ್ಲದೆಯೇ'' ಒಪ್ಪಿಕೊಂಡನು, ಅಂತೆಯೇ ನಾಮಾನನು ಎರಡು ತಲಾಂತು ಬೆಳ್ಳಿಯನ್ನು ಬಟ್ಟೆಗಳ ಜೊತೆಯಲ್ಲಿ ಆತನ ಚೀಲದಲ್ಲಿ ಹಾಕಲಾಯಿತು (5:23ಸಿ). ಈ ವಸ್ತುಗಳು 120-150 ಪೌಂಡಗಳ ವರೆಗೆ (55-68 ಗ್ರಾ) ಇರಬಹುದಾದ ಇವುಗಳನ್ನು ಆತನು ಚೀಲದಲ್ಲಿ ಹಾಕಿ ಅದನ್ನು ಎಲೀಷನೆಡೆಗೆ ಹೊತ್ತೊಯ್ಯಲು ಇಬ್ಬರು ಸೇವಕರಿಗೆ ನೇಮಿಸಿದನು (5:23ಡಿ).

ಅಂತಿಮವಾಗಿ, ಗೇಹಜಿ ಮತ್ತು ನಾಮಾನನ ಸೇವಕರು "ಗುಡ್ಡವನ್ನು'' ಮುಟ್ಟಿದರು (5:24ಎ). ಇಬ್ರಿಯ ಮಾತಿನಲ್ಲಿ "ಗುಡ್ಡ'' ಎಂಬುದಕ್ಕೆ ಅರ್ಥವು ಅಸ್ಪಷ್ಟವಾಗಿದೆ[7] (KJV "ಗೋಪುರ'' ಎಂದಿದೆ), ಈ ಪದವು ಬಹುಶಃ ಊರಿನ ಸ್ವಲ್ಪ ಹೊರಗಿನ[8] "ಚಿರಪರಿಚಿತವಾದ ಗುಡ್ಡ'' ಎಂಬುದನ್ನು ಸೂಚಿಸಬಹುದು. ಗೇಹಜಿಯು ಈ ಇಬ್ಬರು ಮನುಷ್ಯರನ್ನು ಮುಂದೆ ಹೋಗುವುದಕ್ಕೆ ಕಳಿಸುವ ಧೈರ್ಯವನ್ನು ಮಾಡಲಿಲ್ಲ. ಅವರು ಊರ ಸನಿಹಕ್ಕೆ ಬಂದಿದ್ದಾದರೆ, ಜನರು ಅದನ್ನು ನೋಡಬಹುದು - ನಂತರ ಜನರು ಪ್ರಶ್ನಿಸಲು ಆರಂಭಿಸಬಹುದು. ಅದರೊಡನೆ ನಾಮಾನನ ಸೇವಕರು ಎಲೀಷನ ಮನೆಗೆ ಹೋಗಿ, ಎಲೀಷನನ್ನು ಭೇಟಿಯಾಗಲು ಬಂದ ಆ ಇಬ್ಬರು ಯೌವನಸ್ಥರನ್ನು ಭೇಟಿಯಾಗುವದಾಗಿ

ಕೇಳಬಹುದಲ್ಲವೇ.

ಗೇಹಜಿಯು ಅವರನ್ನು ನಿಲ್ಲಿಸಿದನು ಮತ್ತು ನಾಮಾನನಡೆಗೆ ಕಳುಹಿಸಿದನು (5:24ಡಿ). ಆತನು ಬಹುಶಃ ಈ ರೀತಿಯಲ್ಲಿ ಹೇಳಿರಬಹುದು: "ನಾನು ಅವುಗಳನ್ನು ತೆಗೆದುಕೊಂಡು ಹೋಗಬಲ್ಲೆ, ಅದೇ ಸಮಯದಲ್ಲಿ ನಿಮ್ಮ ಸಹಾಯಕ್ಕಾಗಿ ವಂದನೆಗಳು. ನಾಮಾನನು ಮನೆಗೆ ಹೋಗಲು ಕಾತುರನಾಗಿರಬಹುದು, ಆದ್ದರಿಂದ ನೀವು ರಥ ಪರಿವಾರದೊಡನೆ ಮರಳುವದು ಉಚಿತವಾದುದ್ದು ಆಗಿದೆ. ಇದು ಪ್ರವಾದಿಗೆ ಬಲುಮಟ್ಟಿಗೆ ಸಹಾಯಕವಾಗಿದೆ ಎಂಬುದನ್ನು ನಾಮಾನನಿಗೆ ಖಚಿತವಾಗಿ ಹೇಳಲು ಮರೆಯದಿರಿ" ಎಂದು ಹೇಳಿದನು. ಆ ಮನುಷ್ಯರು ಬಹುಶಃ ಆಶ್ಚರ್ಯಚಕಿತರಾಗಿರಬಹುದು, ಆದರೆ ಅವರು ತಮ್ಮ ಚೀಲಗಳನ್ನು ಗೇಹಜಿಗೆ ಒಪ್ಪಿಸಿದರು (5:24ಬಿ) ಮತ್ತು ಅಲ್ಲಿಂದ ಹೊರಟರು (5:24ಸಿ).

ವೇದಭಾಗವು ಹೇಳುವುದೇನೆಂದರೆ ಗೇಹಜಿಯು "ಅವುಗಳನ್ನು [ಕಾಣಿಕೆಯನ್ನು] ಮನೆಯಲ್ಲಿ ಅಡಗಿಸಿಟ್ಟನು" (5:24ಸಿ). ಇದು ಮನೆಯ ಇನ್ನೊಂದು ಭಾಗವಾಗಿರ ಬಹುದು, ಅಂದರೆ ಗೇಹಜಿಯು ತನ್ನ ಯಜಮಾನನೊಡನೆ ಹಂಚಿಕೊಂಡ ಸರಳವಾದ ಮನೆಯಾಗಿರಬಹುದು. ಮುಂದಿನ ಸನ್ನಿವೇಶವನ್ನು ನಾನು ಈ ರೀತಿಯಲ್ಲಿ ಚಿತ್ರಿಸುತ್ತೇನೆ:

> ಗೇಹಜಿಯು ಕಷ್ಟಪಟ್ಟು ಎರಡೂ ಕೈಯಲ್ಲಿ ಭಾರವಾದ ಚೀಲವನ್ನು ಹಿಡಿದುಕೊಂಡು ಗುಡ್ಡದಿಂದ ಕೆಳಗಿಳಿದನು. ಆತನು ಪಟ್ಟಣದ ಹೊರವಲಯಕ್ಕೆ ತಲುಪಿ ಕಡಿದಾದ ದೋಣಿಯ ಮೂಲಕ ಹಾದುಹೋದನು. ಕ್ವಚಿತ್ತಾಗಿ ಆತನು ಉಸಿರನ್ನು ಹಿಡಿದುಕೊಳ್ಳಲು ನಿಲ್ಲುತ್ತಿದ್ದನು ಮತ್ತು ನೋಯುತ್ತಿದ್ದ ಸ್ನಾಯುಗಳನ್ನು ನಿರಾಯಾಸ ಮಾಡಿಕೊಳ್ಳುತ್ತಿದ್ದನು. ಅಂತಿಮವಾಗಿ ಆತನು ಮನೆಯನ್ನು ಮಟ್ಟಿದನು. ತನ್ನ ಚೀಲ ಗಳನ್ನು ಕೆಳಗಿಳಿಸಿದನು, ಮನೆಯ ಬಾಗಿಲನ್ನು ತೆರೆದನು ಮತ್ತು ಇಣುಕಿ ನೋಡಿದನು. ಎಲ್ಲಿಯೂ ಎಲೀಷನು ಕಾಣಲಿಲ್ಲ. ಸರಿ! ಆತನು ಚೀಲವನ್ನು ಇಟ್ಟನು. ಹರಿದ ಬಟ್ಟೆಗಳಿಂದ ಅವುಗಳನ್ನು ಹೊದಿಸಿದನು, ಮತ್ತು ಹಿಂದಕ್ಕೆ ಬಂದು ತನ್ನ ಕಾರ್ಯವನ್ನು ವೀಕ್ಷಿಸಿದನು. ಎಲ್ಲಾ ಸರಿಯಾಗಿದೆ! ಅವನ ಹಣ ಬರಹವು ಕಂತೆಯ ಅಡಿಯಲ್ಲಿ ಅಡಗಿಸಲ್ಪಟ್ಟಿದೆ ಎಂದು ಯಾರೂ ಅನುಮಾನಪಡಲಿಲ್ಲ. ಆತನು ನಿರಾಳದ ಉಸಿರನ್ನು ತೆಗೆದುಕೊಂಡನು. ಕೊನೆಗೂ ಆತನು ಅದನ್ನು ಮಾಡಿದನು! ಆತನು ನಾಮಾನನನ್ನು ದೋಚಿದ್ದನು (ಸೈನಿಕರಿಗೆ ತಕ್ಕಂತ) ಮತ್ತು ಅದೇ ಸಮಯದಲ್ಲಿ, ಆತನನ್ನು ಅದು ಶ್ರೀಮಂತ ಅದು ಮನುಷ್ಯನನ್ನಾಗಿಸಿತ್ತು. ಆತನು ತಂದ ಎಲ್ಲಾ ಬೆಳ್ಳಿಯ ಮತ್ತು ಬಂಗಾರದ ಮೌಲ್ಯವುಳ್ಳ ಬಟ್ಟೆಗಳ ವ್ಯಾಪಾರದಲ್ಲಿ[9] ಮಾರಿ ಬರಬಹುದಾದ ಹಣವನ್ನು ನೆನೆದು ಆತನು ಕಲ್ಪಿಸತೊಡಗಿದನು ಆತನು ಒಬ್ಬ ಸಾಹುಕಾರನಾದ ಜಮೀನು ದಾರನಾಗಬಹುದಿತ್ತು ಮತ್ತು "ಎಣ್ಣೆ ಮರದ ತೋಪುಗಳು, ದ್ರಾಕ್ಷೆತೋಟಗಳು, ಕುರಿದನಗಳು, ಇವುಗಳನ್ನು ಹೊಂದಬಹುದಿತ್ತು" (ವಚನ 26ಸಿ). ಆತನು "ದಾಸದಾಸಿಯರನ್ನೂ ಕೂಡಾ ಕೊಂಡುಕೊಳ್ಳಬಹುದಿತ್ತು" (ವಚನ 26ಡಿ). ಸೇವಕನಾಗಿರುವ ಬದಲಾಗಿ, ಆತನು ಸೇವೆಯನ್ನು ಹೊಂದುವವನಾದನು! ಹೇಗೋ, ಆತನಿಗೆ ಎಲೀಷನು ಅನುಮಾನಪಡದಿರಲೆಂದು ಆತನು ಬಯಸಿದನು. ಆತನು ಈಗಾಗಲೇ ಅದರಲ್ಲಿ ಬಲುದೂರ ನಡೆದಿದ್ದನು. ಆತನು ತನ್ನ ಬಟ್ಟೆಗಳನ್ನು ನೀವಿಕೊಂಡನು, ತನ್ನ ನಿಲುವಂಗಿಯ ಮೇಲಿನ ಧೂಳನ್ನು ಕೊಡವಿಕೊಂಡನು. ಹುಬ್ಬನ್ನು ನೀವಿಕೊಂಡನು,ತನ್ನ ಬೆರಳುಗಳನ್ನು ತಲೆಯ ಕೂದಲುಗಳಲ್ಲಿ ಮತ್ತು ಗಡ್ಡದಲ್ಲಿ ಆಡಿಸಿದನು, ಮತ್ತು ಎಲೀಷನನ್ನು ಕಾಣಲು ಹೊರಟನು.

ಮುಗ್ಧತೆಯ ನೋಟವನ್ನು ತರಿಸಿಕೊಳ್ಳುತ್ತಾ, "ಇವನು ತನ್ನ ಯಜಮಾನನಾದ ಎಲೀಷನ ಮುಂದೆ ಬಂದನು" (5:25ಎ). ನಾನು ಬಾಲಕನಾಗಿದ್ದಾಗ, ನಾನು ಸಣ್ಣ ತಪ್ಪನ್ನು ಮಾಡಿದಾಗ, ನನ್ನ ತಾಯಿಯು ಒಮ್ಮಿಂದೊಮ್ಮಲೇ ಪ್ರತ್ಯಕ್ಷಳಾಗುತ್ತಿದ್ದಳು. ನಾನು

ತಪ್ಪಿತಸ್ಥನೆಂದು ಕಾಣಬಾರದೆಂದು ನಾನು ಬಲು ಕಷ್ಟಪಡುತ್ತಿದ್ದೆನು! ಇಂಥದ್ದೇ ಅನುಭವಗಳು ನಿನ್ನ ಯೌವನದ ದಿನದಲ್ಲಿ ನಿನಗೂ ಇರಬಹುದು.

ಎಲೀಷನು, "ಗೇಹಜಿಯೇ ಎಲ್ಲಿಗೆ ಹೋಗಿ ಬಂದೆ?" ಎಂದು ಕೇಳಿದನು (5:25ಬಿ) ಆತನು ಅವನಿಗೆ "ನಿನ್ನ ಸೇವಕನಾದ ನಾನು ಎಲ್ಲಿಗೂ ಹೋಗಲಿಲ್ಲ" (5:25ಸಿ) ಎಂದು ಉತ್ತರಿಸಿದನು. ಇತ್ತೀಚೆಗೆ, ದ್ವೇಷಿಸುತ್ತಿರುವ ವೈರಿಗಾಗಿ ಸುಳ್ಳುಹೇಳುವದರಲ್ಲಿ ಯಾವ ತೊಂದರೆಯೂ ಇಲ್ಲ ಎಂಬುದು ಗೇಹಜಿಯು ಸಮಜಾಯಿಸಿಕೊಂಡಿದ್ದನು, ಆದರೆ ಈಗ ಆತನು ಸುಳ್ಳಾಡುತ್ತಿರುವದು ದೇವರ ಪ್ರವಾದಿಗೆ ಆಗಿತ್ತು! ಇದು ಸುಳ್ಳಾಡುವುದರ ಹಿಂದಿರುವ ಸಮಸ್ಯೆಯು: ಒಬ್ಬನು ಸುಳ್ಳಾಡಲು ಆರಂಭಿಸಿದ್ದೇ, ಆದರೆ, ಆತನು ಅದನ್ನೇ ಮುಂದುವರೆಸಬೇಕು; ಹಳೆಯ ಸುಳ್ಳನ್ನು ಮುಚ್ಚಲು ಹೊಸದೊಂದು ಸುಳ್ಳನ್ನು ಶೋಧಿಸುತ್ತಾನೆ. ಒಂದು ಸುಳ್ಳು ಹೊಸದೊಂದು ಸುಳ್ಳನ್ನು ಜನ್ಮತಳೆಯುತ್ತದೆ. "ಮೊದಲು ನಾವು ಮೋಸ ಮಾಡಲು ಪ್ರಾರಂಭಿಸಿದಾಗ ಮೋಸದ ಬಲೆಯನ್ನೇ ನೇಯುತ್ತೇವಲ್ಲವೇ!"[10] ಗೇಹಜಿಯು ಪ್ರಾಮಾಣಿಕತೆಯ ಪರೀಕ್ಷೆಯಲ್ಲಿ ವಿಫಲನಾದನು.

ಇನ್ನೂ ಕೆಲವರು ಈ ಪರೀಕ್ಷೆಯಲ್ಲಿ ವಿಫಲರಾಗುತ್ತಿದ್ದಾರೆ, ಅಪ್ರಾಮಾಣಿಕತೆಯು ಎಲ್ಲೆಡೆ ತುಂಬಿ ತುಳುಕುತ್ತಿದೆ. ಗೇಹಜಿಯು ಪ್ರತ್ಯಕ್ಷವಾಗಿ ಅನ್ಯಜನಾಂಗದವರಿಗೆ ಸುಳ್ಳು ಹೇಳುವದು ಸರಿಯಾದದ್ದು ಎಂದು ಯೋಚಿಸಿದನು, ಮತ್ತು ಕೆಲ ಜನರು ಇಂದು (ತಮ್ಮನ್ನು ತಾವು "ಪ್ರಾಮಾಣಿಕ" ಜನರು ಎಂದು ಪರಿಗಣಿಸುತ್ತಿರುವ ಜನರು ಇರಬಹುದು) ಕೆಲ ಸಂದರ್ಭಗಳಲ್ಲಿ ಯಾವ ಸಮಸ್ಯೆಯೇ ಇಲ್ಲ ಎಂದು ಭಾವಿಸುತ್ತಾರೆ. ತನ್ನ ಆದಾಯ ಕರಕ್ಕೊಸ್ಕರ ಸರಕಾರಕ್ಕೆ ಸುಳ್ಳು ಹೇಳುವುದು, ವೇಗದಿಂದ ವಾಹನ ಚಲಾವಣೆಗಾಗಿ ಪ್ಯಾಟ್ರೋಲಮೆನ್‌ಗಳಿಗೆ ಸುಳ್ಳು ಹೇಳುವದು, ದೊಡ್ಡ ಸಂಸ್ಥೆಗಳಿಂದ ದೊಡ್ಡ ಮೊತ್ತಕ್ಕಾಗಿ ಕೈಚಾಚುವದು. ಹೇಗೋ, ಸುಳ್ಳು ಸುಳ್ಳೇ ಯಾರು ಯಾರಿಗೆ ಸುಳ್ಳಾಡುತ್ತಿದ್ದಾರೆ ಎನ್ನುವದು ಇಲ್ಲಿ ಮುಖ್ಯವಲ್ಲ. ಬೈಬಲ್ "... ಎಲ್ಲಾ ಸುಳ್ಳುಗಾರರಿಗೆ ... ಇವರಿಗೆ ಸಿಕ್ಕುವದು ಬೆಂಕಿ ಗಂಧಕಗಳುರಿಯುವ ಕೆರೆಯೇ" (ಪ್ರಕಟಣೆ 21:8).

"ಸುಳ್ಳಾಡುವುದನ್ನು ಬಿಟ್ಟುಬಿಟ್ಟು ಪ್ರತಿಯೊಬ್ಬನು ತನ್ನ ನೆರೆಯವನ ಸಂಗಡ ಸತ್ಯವನ್ನೇ ಆಡಲಿ" (ಎಫೆಸ 4:25ಎ) ಎಂದು ಪೌಲನು ನಮ್ಮಲ್ಲಿ ಪ್ರತಿಯೊಬ್ಬರಿಗೂ ಸವಾಲನ್ನೆಸೆಯುತ್ತಾನೆ. ತಿರುಗಿ, ಆತನು ನಮ್ಮಲ್ಲಿ ಪ್ರತಿಯೊಬ್ಬರೂ "ಪ್ರೀತಿಯಿಂದ ಸತ್ಯವನ್ನಾಡಬೇಕು" (ಎಫೆಸ 4:15) ಎಂದು ವಿವರಿಸುತ್ತಾನೆ. ಪ್ರಾಮಾಣಿಕರಾಗಿರುವದು ಇತರವುಗಳಿಗಿಂತ ಕಠಿಣದಾಯಕವಾದುದ್ದು ಎಂದು ಕೆಲವರು ಕಂಡುಕೊಳ್ಳುತ್ತಾರೆ; ಆದರೆ, ಒಂದು ಸಮಯ ಬಂದಾಗ ನಮ್ಮಲ್ಲಿ ಎಲ್ಲರೂ ಪ್ರಾಮಾಣಿಕತೆಯ ಪರೀಕ್ಷೆಯನ್ನು ತೆಗೆದುಕೊಳ್ಳಲೇಬೇಕು. ನಿಯಮದಂತೆ, ಸುಳ್ಳು ಒಬ್ಬನ ಕ್ರಿಯೆಗಳಿಂದಾಗುವ ಪರಿಣಾಮವನ್ನು ತಪ್ಪಿಸಿಕೊಳ್ಳಲು ಹೇಳಲ್ಪಡುವವುಗಳಾಗಿವೆ. ಮುಂದಿನ ಸಮಯದಲ್ಲಿ ಸುಳ್ಳು ಹೇಳುವುದಕ್ಕಿಂತ ಸತ್ಯವನ್ನು ಹೇಳುವಲ್ಲಿ, ನಿಮಗೆ ನೀವು ಗೇಹಜಿಯ ಸುಳ್ಳಿನ ಸಂದರ್ಭವನ್ನು ನೆನಪಿಗೆ ತಂದಾಗ ಇದು ನಿಮಗೆ ಫಲಪ್ರದವಾಗಿಯೂ ಅಥವಾ ಕಡಿಮೆ ನೋವುದಾಯಕವಾಗಿಯೂ ಕಾಣುತ್ತದೆ. ದೇವರು ಸುಳ್ಳಾಡುವುದನ್ನು ಹಗುರವಾಗಿ ತೆಗೆದುಕೊಳ್ಳಲಾರನು; ಆತನು "ಸುಳ್ಳಿನ ನಾಲಿಗೆ"ಯನ್ನು ದ್ವೇಷಿಸುವವನಾಗಿದ್ದಾನೆ (ಜ್ಞಾನೋಕ್ತಿ 6:16, 17)!

**ದುರಾಸೆಯ ಪರೀಕ್ಷೆ**

ಗೆಹೆಜಿಯು ತಾನು ಎಲ್ಲಿದ್ದನು ಎಂಬುದರ ಬಗೆಗೆ ಸುಳ್ಳನ್ನು ಹೇಳಿದನು, ಆತನು ಬಹುಶಃ ದೇವರು ತನ್ನ ಯಜಮಾನನಿಂದ ನೈಜ ಸಂಗತಿಯನ್ನು ಮುಚ್ಚಿಟ್ಟ ಸಂದರ್ಭಗಳಲ್ಲಿ ಇದೂ ಒಂದಾಗಿದೆ ಎಂದು ಆತನು ಕುಣಿದಾಡಿರಬಹುದು (ನೋಡಿರಿ 4:27) - ಆದರೆ ಅದು ಹಾಗಾಗಿರಲಿಲ್ಲ. ದೇವರು ಎಲೀಷನಿಗೆ ಪ್ರತಿಯೊಂದನ್ನು ಪ್ರಕಟಿಸಿದ್ದನು. ಪ್ರವಾದಿಯು

ಆತನಿಗೆ, "ಒಬ್ಬನು ರಥದಿಂದಿಳಿದು ಬಂದು ನಿನ್ನನ್ನು ಎದುರುಗೊಂಡದ್ದು ನನ್ನ ದಿವ್ಯದೃಷ್ಟಿಗೆ ಕಾಣಿಸಲಿಲ್ಲವೆಂದು ನೆನಿಸುತ್ತೀಯೋ?" (5:26ಎ; ಯೋಹಾನ 1:48ದೊಡನೆ ಹೋಲಿಸಿರಿ). ಹೀಗೆ ಗೇಹಜಿಯ ಕಾರ್ಯವು ಪ್ರಕಟವಾಗಿತ್ತು.

ಎಲೀಷನು, "ದ್ರವ್ಯ ಬಟ್ಟೆಗಳು, ... ಇವುಗಳನ್ನು ಸಂಪಾದಿಸುವ ಸಮಯವೋ?" (5:26ಬಿ) ಎಂದು ಕೇಳಿದನು. ಹಣದ ಸಲುವಾಗಿ ಈ ಸೇವಕನ ಹೃದಯದಲ್ಲಿನ ಯೋಜನೆಯನ್ನು ಸಹ ಪ್ರವಾದಿಯು ಓಡಿಕೊಂಡಿದ್ದನು: "ಎಣ್ಣೆ ಮರದ ತೋಪುಗಳು, ದ್ರಾಕ್ಷೆ ತೋಟಗಳೂ, ಕುರಿದನಗಳು, ದಾಸದಾಸಿ ಜನವು ಇವುಗಳನ್ನು ಸಂಪಾದಿಸುವುದಕ್ಕೆ ಇದು ಸಮಯವೋ?" (5:26ಬಿ, ಸಿ) ಹೀಗೆ ಗೇಹಜಿಯ ದುರಾಶೆಯು ಬಹಿರಂಗವಾಯಿತು.

ನಾಮಾನನಿಗೆ ಯೆಹೋವನ ಪ್ರವಾದಿಗಳು ಇಸ್ರಾಯೇಲಿನ ಮತ್ತು ಅರಾಮ್ಯದ ಸುಳ್ಳುಪ್ರವಾದಿಗಳಿಗಿಂತ ಭಿನ್ನವಾದವರು ಎಂಬುದನ್ನು ತೋರಿಸಲು ಇದ್ದ ಸಮಯ ಇದಾಗಿತ್ತು. ದೇವರ ವರವು ಹಣವು ಮಾರಲ್ಪಡುವಂತದ್ದಲ್ಲ ಎಂಬುದನ್ನು ತೋರಿಸುವುದಕ್ಕೆ ಇದ್ದ ಸಮಯವೂ ಇದಾಗಿತ್ತು. ದೇವರ ಕರುಣೆಯಿಂದ ವೈಯಕ್ತಿಕವಾಗಿ ಪ್ರಯೋಜನ ಮಾಡಿಕೊಳ್ಳುವುದಕ್ಕಾಗಿ ಇರುವ ಸಮಯ ಇದಾಗಿರಲಿಲ್ಲ. ಸುಳ್ಳಾಡುವ ಮತ್ತು ಮೋಸ ಮಾಡುವ ಸಮಯವೂ *ಇದಾಗಿರಲಿಲ್ಲ*; ಅದಕ್ಕಿಂತಲೂ ಇದು ಸಮಯವೇ ಅಲ್ಲ.

ಗೇಹಜಿಯು ಹೇಗೆ ತನ್ನ ದುರಾಸೆಯು ಬಲು ದೊಡ್ಡದೆಂದು ಅದನ್ನು ಸಂತೃಪ್ತಿಗೊಳಿಸಲು ಹೆಚ್ಚಿನದೆಲ್ಲವನ್ನೂ ಮಾಡಲು ಒಪ್ಪಿಕೊಳ್ಳುವುದರ ಬಗೆಗೆ ಬೈಬಲ್ ನಮಗೇನೂ ಹೇಳುವದಿಲ್ಲ. ಬಹುಶಃ ಆತನು ತನ್ನ ತರಬೇತಿಯನ್ನು ಅತ್ಯುತ್ಸಾಹದಿಂದ ಮಾಡಲು ಪ್ರಾರಂಭಿಸಿದ್ದನು. ಬಹುಶಃ ಪ್ರವಾದಿಯೊಡನೆ ಇರುವಿಕೆಯು ತನ್ನ ಜೀವಿತನ್ನು ಸರಳವಾಗಿಸುವದು ಎಂದು ಆತನು ಯೋಚಿಸಿರಬಹುದು. ಹಾಗಿದ್ದದ್ದೇ ಆದರೆ, ಆತನು ಈ ಸಂದರ್ಭದಲ್ಲಿ ಬೇಗನೇ ಭ್ರಮನಿರಸನ ಗೊಂಡಿರಬಹುದುಎಂದು ನಾನು ನೆನಿಸುತ್ತೇನೆ ಆತನು ಹೀಗೆ ಯೋಚಿ ಸಿರಬಹುದು. "ನಾವು ಅತಿ ಕಡಿಮೆಯದನ್ನು ಹೊಂದಿದ್ದೇವೆ - ಮತ್ತು ಯಾರಾದರೂ ನಮಗೇನಾದರೂ ಕೊಟ್ಟರೆ ಅದನ್ನು ಎಲೀಷನು ಕೊಟ್ಟುಬಿಡುತ್ತಾನೆ [ನೋಡಿರಿ 4:42]! ನನ್ನ ಯಜಮಾನನಿಗೆ ಒಂದು ವೇಳೆ ವ್ಯವಹಾರ ಜ್ಞಾನವೇನಾದರೂ ಇದ್ದಲ್ಲಿ, ನಾವು ಶ್ರೀಮಂತರಾಗುವುದರಲ್ಲಿ ಸಂಶಯವೇ ಇಲ್ಲ!" ತಿರುಗಿ, ಗೇಹಜಿಯ ಮನದಲ್ಲಿ ಏನು ಇತ್ತು ಎಂಬುದನ್ನು ನಾವು ತಿಳಿಯೆವು ಆತನು ದುರಾಸೆಯ ಪರೀಕ್ಷೆಯಲ್ಲಿ ವಿಫಲನಾದನು - ಹಿನಾಯವಾಗಿ ಆತನು ವಿಫಲನಾದನು.

ಆರಂಭದ ಸಮಯದಿಂದಲೇ, ಅತ್ಯಾಸೆ (ದುರಾಶೆ) ಮನುಕುಲದ ಬಲುದೊಡ್ಡ ಸಮಸ್ಯೆಯಾಗಿದೆ. ಹಳೆಯ ಒಡಂಬಡಿಕೆಯಲ್ಲಿ, "ಹತ್ತು ಆಜ್ಞೆಗಳಲ್ಲಿ ಕೊನೆಯದಾದ ಆಜ್ಞೆಯು ಆಶಿಸಬೇಡ ..." (ವಿಮೋಚನಕಾಂಡ 20:17). ಹೊಸ ಒಡಂಬಡಿಕೆಯಲ್ಲಿ ಯೇಸುವು "ಎಲ್ಲಾ ಲೋಭಕ್ಕೂ ಎಚ್ಚರಿಕೆಯಾಗಿದ್ದು ನಿಮ್ಮನ್ನು ಕಾಪಾಡಿಕೊಳ್ಳಿರಿ. ಒಬ್ಬನಿಗೆ ಎಷ್ಟು ಆಸ್ತಿಯಿದ್ದರೂ ಅದು ಅವನಿಗೆ ಜೀವನಾಧಾರವಾಗಿರುವುದಿಲ್ಲ" (ಲೂಕ 12:15) ಎಂದು ಹೇಳಿದ್ದಾನೆ. ಮನುಕುಲದ ಪಾಪಮಯತೆಯನ್ನು ವರ್ಣಿಸುತ್ತಾ, ಪೌಲನು ಜನರು "... ಲೋಲುಪ್ತಿ ... ತುಂಬಿದವರಾಗಿದ್ದಾರೆ" (ರೋಮಾಪುರ 1:29) ಎಂದು ಹೇಳುತ್ತಾನೆ. "ಅದರೊಡನೆ ಆತನು ಮನುಷ್ಯರು ... ಹಣದಾಸೆಯವರೂ ... ದೇವರನ್ನು ಪ್ರೀತಿಸದೆ ಇರುವವರೂ ಆಗಿದ್ದಾರೆ" (2 ತಿಮೊಥೆ 3:2-4) ಎಂದು ಹೇಳುತ್ತಾನೆ.

ಯಾರೊಬ್ಬನೂ ಪಾಪದ ದುರಾಸೆಯಿಂದ ವಿಮುಕ್ತರಾಗಿಲ್ಲ. ಬಡವರು ಸದಾ ತಮಗೆ ಅವಶ್ಯವಿದ್ದುದನ್ನು ಹೊಂದಿರಲಾರರು, ಮತ್ತು ಶ್ರೀಮಂತರು ತಮಗೆ ಬಯಸಿದ್ದೆಲ್ಲವನ್ನೂ ಎಂದಿಗೂ ಹೊಂದಿರಲಾರರು. ಇಬ್ರಿಯ ಪುಸ್ತಕದ ಲೇಖಕನು ನಮ್ಮಲ್ಲಿ ಪ್ರತಿಯೊಬ್ಬರಿಗೂ ಈ ಸವಾಲನ್ನು ಎಸೆಯುತ್ತಾನೆ: "ದ್ರವ್ಯಾಶೆಯಿಲ್ಲದವರಾಗಿರಿ; ನಿಮಗಿರುವವುಗಳಲ್ಲಿ ತೃಪ್ತ ರಾಗಿರಿ; ನಾನು ನಿನ್ನನ್ನು ಎಂದಿಗೂ ಕೈ ಬಿಡುವುದಿಲ್ಲ ಎಂದಿಗೂ ತೊರೆಯುವುದಿಲ್ಲವೆಂದು

ದೇವರು ತಾನೇ ಹೇಳಿದ್ದಾನೆ" (ಇಬ್ರಿಯ 13:5). ಗೇಹಜಿಯ ಮನದಲ್ಲಿ ದುರಾಸೆಯು ತುಂಬಿಕೊಂಡಿದ್ದನ್ನು ಎಲೀಷನು ತಿಳಿದನು ಹಾಗೇಯೇ ನಾವು ಸದ್ಯದ ಪರಿಸ್ಥಿತಿಯಲ್ಲಿ ಶೋಧನೆಗೆ ಒಳಗಾದರೆ ದೇವರು ಅದನ್ನು ತಿಳಿದಿರುತ್ತಾನೆ: "ಆತನ ದೃಷ್ಟಿಗೆ ಸಮಸ್ತವೂ ಮುಚ್ಚುಮರೆಯಿಲ್ಲದ್ದಾಗಿಯೂ ಬೈಲಾದದ್ದಾಗಿಯೂ ಆದೆ. ಆತನ ಸನ್ನಿಧ್ಯದಲ್ಲಿ ಅಗೋಚರವಾದ ಸೃಷ್ಟಿಯೂ ಒಂದೂ ಇಲ್ಲ" (ಇಬ್ರಿಯ 4:13). ನಾವು ದುರಾಸೆಯ ಪರೀಕ್ಷೆಯಲ್ಲಿರುವಾಗ ನಮ್ಮ ದೇವರು ನಮಗೆ ಸಹಾಯ ಮಾಡಲಿ!

## ಗೇಹಜಿಯ ದುರಂತ (5:27)

ಗೇಹಜಿಯ ಅಪ್ರಮಾಣಿಕತೆಯು ಹೊರಬಿದ್ದಾಗ ಆತನಿಗೆ ಹೇಗಾಗಿರಬಹುದು, ಎಂಥ ಮುಜುಗರ ಆತನಿಗಾಗಿರಬಹುದು ಎಂಬುದನ್ನು ನೀವು ಊಹಿಸಬಲ್ಲಿರಾ? ಹೇಗೋ ಅದಕ್ಕಿಂತ ಕೆಟ್ಟದ್ದು ಇನ್ನೂ ಬರಬೇಕಿದೆ. ಎಲೀಷನು ಮುಂದುವರೆಸುತ್ತಾ "ನಾಮಾನನ ಕುಷ್ಠವು ನಿನ್ನನ್ನು ನಿನ್ನ ಸಂತಾನದವರನ್ನೂ[11] ಸದಾಕಾಲ ಹಿಡಿದಿರಲಿ ಅಂದನು" (2 ಅರಸು 5:27ಎ). ಕೆಲವರು ಇದನ್ನು "ತಕ್ಕ ಸಾಕ್ಷಿ" ಎನ್ನುತ್ತಾರೆ; ಇತರರು ಇದನ್ನು "ಅಪರಾಧಕ್ಕೆ ತಕ್ಕದಾದ ಶಿಕ್ಷೆ" ಎಂದು ಆಚರಿಸುತ್ತಾರೆ.

ಕೆಲವರು ಹೀಗೆ ವಿರೋಧಿಸಬಹುದು. "ಒಂದು ನಿಮಿಷ ತಡೆಯಿರಿ. ಗೇಹಜಿಯು ಯಾವುದಕ್ಕಾಗಿ ಶಿಕ್ಷೆಗೊಳಗಾಗಬೇಕು ಎಂಬುದನ್ನು ನಾನು ತಿಳಿದುಕೊಳ್ಳಬಲ್ಲೆ, ಆದರೆ ಆತನ ಸಂತತಿಯವರಿಗೆ ಯಾಕೆ ಈ ಶಿಕ್ಷೆ? ಅವರಲ್ಲಿ ಯಾರು ತಪ್ಪಿತಸ್ಥರಲ್ಲ" ಎಂದು ಹೇಳ ಬಹುದು. ಮೋಶೆಯ ಧರ್ಮಶಾಸ್ತ್ರವು ಹೇಳುವುದೇನೆಂದರೆ ದೇವರು "ತಂದೆಗಳ ದೋಷಗಳ ಫಲವನ್ನು ಮಕ್ಕಳ ಮೇಲೆ ಮೂರು ನಾಲ್ಕು ತಲೆಗಳವರೆಗೆ ಬರಮಾಡುವವನಾಗಿದ್ದೇನೆ" (ವಿಮೋಚನಾಕಾಂಡ 20:5; ನೋಡಿರಿ ವಿಮೋಚನಕಾಂಡ 34:7; ಅರಣ್ಯಕಾಂಡ 14:18; ಧರ್ಮೋಪದೇಶಕಾಂಡ 5:9). Clyde M. Miller ಸೂಚಿಸುವುದೇಂದರೆ, "ಗಂಭೀರ ವಾದ ಶಿಕ್ಷೆ ಇದರ ಅರ್ಥ ಪಾಪವು ಬಲು ಗಂಡಾಂತರಕಾರಿಯಾದುದ್ದು ಆಗಿದ್ದು ಇದು ಪಾಪಿಯನ್ನು[12] ಒಳಗೊಂಡು ಎಲ್ಲರಿಗೂ ಅಪಾಯವನ್ನು ಒಡ್ಡುತ್ತದೆ." F. W. Krummacher ಹೀಗೆ ಬರೆಯುತ್ತಾರೆ, "ಅವುಗಳು ದೇವರು ಯಾರಾಗಿದ್ದಾನೆ ಎಂಬುದರೊಡನೆ ವ್ಯಾಜ್ಯವನ್ನು ತಂದೊಡ್ಡುತ್ತದೆ."[13]

ಇದು ಮಕ್ಕಳ ಮೇಲೆ ಬರಮಾಡಿಕೊಂಡಂತಹ ಅನ್ಯಾಯದ *ಪರಿಣಾಮವೇ ಹೊರತು ತಪ್ಪಿನ ಅನ್ಯಾಯವಲ್ಲ* ಎಂದು ನಾನು ಒತ್ತಿ ಹೇಳಬಹುದು. ಇಂದು ನಾವು ಮೋಶೆಯ ಧರ್ಮಶಾಸ್ತ್ರದ ಅಡಿಯಲ್ಲಿ ವಾಸಿಸುತ್ತಾ ಇಲ್ಲ. ಹೇಗೋ, ನಾವು ನಮ್ಮನ್ನು ನೋಡಿಕೊಂಡಾಗ, ಅದು "ಪಾಪದ ತಂದೆ" ಎಂಬದು ಇನ್ನೂ ನಿಜವಾಗುವುದನ್ನು ನಾವು ಕಾಣುತ್ತೇವೆ (ವಿಮೋ ಚನಾಕಾಂಡ 20:5; NIV) ಇದು ಯಾವಾಗಲೂ ಮಕ್ಕಳ ಮೇಲೆ ಹೊರಿಸಲ್ಪಡುತ್ತದೆ:

- ನಿಂದನೆಗೆ ಒಳಗಾದ ಪೋಷಕರು ಮಕ್ಕಳು ತಾವೇ ನಿಂದನೆಗೆ ಒಳಗಾಗುತ್ತಾರೆ.
- ವಿಚ್ಛೇದಿತ ಪೋಷಕರ ಮಕ್ಕಳು ಹೆಚ್ಚಾಗಿ ವಿಚ್ಛೇದಿತರಾಗಿರುತ್ತಾರೆ.
- ಮಧ್ಯವ್ಯಸನೀಯ ಮಕ್ಕಳು ಹೆಚ್ಚಾಗಿ ಮಧ್ಯವ್ಯಸನೀಗಳಾಗಿರುತ್ತಾರೆ.

ನಿಮ್ಮ ತಂದೆ ತಾಯಿಗಳು ಅಥವಾ ಅಜ್ಜ ಅಜ್ಜಿಯಂದಿರು ಯಾವುದೇ ತರನಾದ ಪಾಪವನ್ನು ಮಾಡಿದ್ದಾದರೆ ನೀನೂ ಸಹ ಆ ತರದ ಪಾಪವನ್ನು ಮಾಡಿದ್ದಾದರೆ ನೀನೂ ಸಹ ಆ ತರದ ಪಾಪವನ್ನು ಮಾಡುವುದು ಅನಿವಾರ್ಯವಾಗಿರುತ್ತದೆ ಎಂದು ನಾನು ಹೇಳ ಬಯಸುತ್ತೇನೆ ಎಂದುಕೊಂಡೆಯಾ? ಇಲ್ಲ! ದೇವರ ಸಹಾಯದಿಂದ ಆವ್ಯೂಹವನ್ನು ನೀವು ಒಡೆಯಬಹುದು. ನಾನು ಹೇಳುವುದೇನೆಂದರೆ, ನೀವು ಪಾಪಮಾಡುವಾಗ ಕೇವಲ ನಿಮ್ಮ

ಬಗ್ಗೆ ಮಾತ್ರ ಅದರ ಪರಿಣಾಮಗಳನ್ನು ಯೋಚಿಸದೇ ಅದು ಬೇರೆಯವರ ಮೇಲೆ ಮಾಡುವ ಪರಿಣಾಮಗಳನ್ನೂ ಯೋಚಿಸಬೇಕು. ಕಷ್ಟಪಡುವವರಲ್ಲಿ ನೀನು ಅತಿಯಾಗಿ ಪ್ರೀತಿಸುವವರೂ ಅದರಲ್ಲಿರಬಹುದು!

ತೀರ್ಪು ಕೊಡಲ್ಪಟ್ಟಿದೆ, ಮತ್ತು ಶಿಕ್ಷೆಯೂ ಕೂಡಾ ಕಾರ್ಯಗತಮಾಡಲ್ಪಟ್ಟಿದೆ. ಗೇಹಜಿಯ "ಅವನು ಹಿಮದಂತೆ ಬಿಳುಪಾಗಿ ಅವನ [ಎಲೀಷ] ಸನ್ನಿಧಿಯಿಂದ ಹೊರಟುಹೋದನು" (2 ಅರಸು 5:27ಬಿ; ಇದನ್ನು ಅರಣ್ಯಕಾಂಡ 12:10ರೊಡನೆ ಹೋಲಿಸಿರಿ). ತಕ್ಷಣವೆ ಗೇಹಜಿಯ ದುರಾಶೆಯ ಕನಸು ಚೂರಾಯಿತು. ಆತನೆಂದಿಗೂ ಶ್ರೀಮಂತನಾದ ಜಮೀನ್ದಾರನಾಗಲಿಲ್ಲ; ಆತನು ಎಂದಿಗೂ ಸೇವಕರನ್ನು ಹೊಂದಲಿಲ್ಲ. ಬದಲಾಗಿ, ಆತನು ತನ್ನ ದಿನಗಳಲ್ಲಿ ಒಬ್ಬೊಂಟಿಗನಾಗಿ ಬಹಿಷ್ಕೃತನಾದನು, ಯಾರೊಬ್ಬನೂ ಮುಟ್ಟಲಪೇಕ್ಷಿಸದ ಶ್ರೀಮಂತರಲ್ಲಿ ಒಬ್ಬನಾದನು.[14]

ಜಗತ್ತು ಪಾಪದ ವಿಷಯವಾಗಿ ಹಗುರಭಾವನೆಯನ್ನು ತೋರುತ್ತದೆ ಮತ್ತು ಆಪಾಪಗಳು ಶಿಕ್ಷೆಯ ಪರಿಣಾಮದ ವಿಚಾರವನ್ನು ಅದು ಹಾಸ್ಯಮಾಡುತ್ತದೆ. ಕ್ಷಯಿಸುತ್ತಿರುವ ಮತ್ತು ಕೊಳಕಾಗುತ್ತಿರುವ ಗೇಹಜಿಯ ದೇಹದೆಡೆಗೆ ನೋಡಿರಿ ಮತ್ತು "ದ್ರೋಹಿಗಳ ಮಾರ್ಗವು ಕಠಿಣದಾಯಕವಾದುದ್ದು" (ಜ್ಞಾನೋಕ್ತಿ 13:15; KJV) ಎಂಬುದನ್ನು ಕಲಿಯುತ್ತೇವೆ. ಇಂದು ದಂಡಗಳು ಸಾಮಾನ್ಯವಾಗಿ ದೈಹಿಕವಾದುದು ಆಗಿರುವುದಿಲ್ಲ, ಆದರೆ ಆತ್ಮೀಕವಾಗಿರುತ್ತವೆ; ಆದರೆ ಅದರ ಅರ್ಥವು ಅವುಗಳು ಕಡಿಮೆ ಎಂದಲ್ಲ. ಪೌಲನು ಹೀಗೆ ಬರೆಯುತ್ತಾನೆ "ಪಾಪವು ಕೊಡುವ ಸಂಬಳವು ಮರಣ" (ರೋಮಾಪುರ 6:23ಎ) - ಆತ್ಮೀಕ ಮರಣ (ನೋಡಿರಿ ಎಫೆಸ 2:1), ದೇವರಿಂದ ಬೇರ್ಪಡುವಿಕೆ (ಯೆಶಾಯ 59:2; 2 ಥೆಸಲೋನಿಕ 1:9). ಅಂಥವರಿಗೆ ಯೇಸು "(ನಿಮ್ಮ) ಪಾಪದಲ್ಲಿ ಸಾಯುವಿರಿ" "ನಾನು ಹೋಗುವಲ್ಲಿಗೆ [ಪರಲೋಕಕ್ಕೆ] ನೀವು ಬರಲಾರಿರಿ" (ಯೋಹಾನ 8:21) ಎಂದು ಹೇಳುತ್ತಾನೆ.

ನಿನ್ನ ಜೀವಿತದಲ್ಲಿ ಕ್ಷಮಿಸಲಾಗದ ಪಾಪವಿದ್ದದ್ದಾರೆ, ಕ್ಷಣವು ತಡಮಾಡಬೇಡ - ಹಿಂದೆಗೆಯಬೇಡ - ಆದರೆ ದೇವರ ಕರುಣೆಯ ಅಡಿಯಲ್ಲಿ ನಿನ್ನನ್ನು ಒಂದು ಸಾರಿ ಇರಿಸಿಕೋ! "ಯೆಹೋವನು ಸಿಕ್ಕುವ ಕಾಲದಲ್ಲಿ ಆತನನ್ನು ಆಶ್ರಯಿಸಿರಿ, ಆತನು ಸಮೀಪದಲ್ಲಿರುವಾಗ ಆತನಿಗೆ ಭಿನ್ನಹಮಾಡಿರಿ" (ಯೆಶಾಯ 55:6). ಯೋಹಾನನು ಹೀಗೆ ಬರೆಯುತ್ತಾನೆ "ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿ ಮಾಡುವನು" (1 ಯೋಹಾನ 1:9) ನಿನ್ನ ಪಾಪವನ್ನು ಗುರುತಿಸಿಕೋ ಮತ್ತು ಆತನ ಚಿತ್ತವನ್ನು ಮಾಡು ಹೀಗೆ ಆತನು ನಿನ್ನ ಜೀವಿತವನ್ನು ಆಶೀರ್ವದಿಸುವನು. ಬಲು ತಡವಾಗುವದಕ್ಕಿಂತಲೂ ಮುಂಚೆಯೇ ಇದನ್ನು ಮಾಡು (ಇಬ್ರಿಯ 3:13; 2 ಕೊರಿಂಥ 6:2)!

## ಮುಕ್ತಾಯ

2 ಅರಸು 5ನೇ ಅಧ್ಯಾಯದ ಅಭ್ಯಾಸದಲ್ಲಿ, ನಾವು ನಾಮಾನ ಮತ್ತು ಗೇಹಜಿಯ ಮಧ್ಯ ವ್ಯತ್ಯಾಸಗಳನ್ನು ಕಾಣುತ್ತೇವೆ. ಇಂದು ನೀನು ನಾಮಾನನಂತೆ ಇರಬಹುದು! ನೀನು ನಿನ್ನ ಪಾಪವೆಂಬ ಕುಷ್ಠದಿಂದ ವಾಸಿಯಾಗಬಹುದು ಮತ್ತು ಆತನ ಸ್ವಕನಾಗಬಹುದು. "ಯಾಕೆಂದರೆ, ಆದರೆ ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿಯ ದೇವರ ಉಚಿತ ವರವು ನಿತ್ಯ ಜೀವವು ಸಿಕ್ಕಿತ್ತದೆ" (ರೋಮಾಪುರ 6:23) ಕ್ರಿಸ್ತನು ನಿಮ್ಮನ್ನು ತನ್ನ ರಕ್ತದಿಂದ ಶುದ್ಧಿ ಮಾಡಬಲ್ಲನು (1 ಪೇತ್ರ 1:18, 19)! ಆತನೆಡೆಗೆ ಇಂದೇ ಬಾ!

ಟಿಪ್ಪಣಿಗಳು

[1]ಈ ಹೇಳಿಕೆಯು Charles Swindoll ರವರಿಂದ ಮಾಡಲ್ಪಟ್ಟಿದ್ದು "Naaman and Gehazi: Characters in Contrast" ಬಂದಿದೆ. [2]M. A. Macleod, "Gehazi," in *The International Standard Bible Encyclopedia,* rev., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1982), 2:423. [3]M. R. Wilson, "Gehazi," in *The Zondervan Pictorial Encyclopedia of the Bible*, ed. Merrill C. Tenney (Grand Rapids, Mich.: Zondervan Publishing House, 1976), 2:670. ಈ ಕಥೆಯು ಮುಂದಿನ ಪಾಠದಲ್ಲಿ ಸಂಪೂರ್ಣವಾಗಿದೆ. [4]Warren W. Wiersbe, *Be Distinct* (Colorado Springs, Colo.: Victor, 2002), 36. [5]ನಾಮಾನ ಮತ್ತು ಗೇಹಜಿ ಇಬ್ಬರಿಗೂ ಶಾಲೋಮ ರೀತಿಯಲ್ಲಿ ಉಪಯೋಗಿಸಲ್ಪಟ್ಟಿದೆ (Adam Clarke, *The Holy Bible with a Commentary and Critical Notes*, vol. 2, *Joshua–Esther* [New York: Abingdon-Cokesbury Press, n.d.], 499). [6]"ಆತನನ್ನು ಪ್ರೇರೇಪಿಸಿದನು" ಎಂಬ ಪದಗಳು ಗೇಹಜಿಯು ಸಾಂಪ್ರದಾಯಿಕವಾದ ಭಾಗದಂತೆ ಗೆಹೆಜಿಯು ಮೊದಲು ನಿರಾಕರಿಸಿದನು ಎಂಬುದನ್ನು ಸೂಚಿಸುವವುಗಳಾಗಿವೆ. [7]Clyde M. Miller, *First and Second Kings,* The Living Word Commentary series, vol. 7 (Abilene, Tex.: A.C.U. Press, 1991), 337. [8]C. F. Keil and F. Delitzsch, "1 and 2 Kings," *Commentary on the Old Testament,* vol. 3, *1 and 2 Kings, 1 and 2 Chronicles, Ezra, Nehemiah, Esther* (Peabody, Mass.: Hendrickson Publishers, 1989), 322. [9]ಅನೇಕ ಬರಹಗಾರರು ನಂಬುವುದೇನೆಂದರೆ 26ನೇಯ ವಚನದಲ್ಲಿನ ಎಲೀಷನ ಮಾತುಗಳು ಗೇಹಜಿಯ ಯೋಚನೆಯನ್ನು ಸೂಚಿಸುವವುಗಳಾಗಿವೆ. "ಆತನು ಇದನ್ನು ಮಾಡುವುದಾಗಿ ತನ್ನ ಹೃದಯದಲ್ಲಿ ಯೋಚಿಸುವವನಾಗಿದ್ದನು" ಎಂದು ಪ್ರಾಚೀನವಾದ ಒಂದು ತರಗುಮ್ ಸೇರಿ ಸುವುದಾಗಿದೆ. (ತರಗುಮ್ ಅಂದರೆ ಆರ್ಯಮಿಕ ಭಾಷೆಯಲ್ಲಿನ ಹಳೆ ಒಡಂಡಿಕೆಯ ಭಾಗದ ಭಾಷಾಂತರವಾಗಿದೆ. ಈ ಭಾಷಾಂತರಗಳ ವಿವರಗಳು ಮತ್ತು ವೇದ ಭಾಗದ ವ್ಯಾಖ್ಯಾನವೂ ಆಗಿದೆ.) [10]Sir Walter Scott, *Marmion* [1808], 6.17; quoted in John Bartlett, *Bartlett's Familiar Quotations,* 16th ed., ed. Justin Kaplan (Boston: Little, Brown, and Co., 1992), 378.

[11]ಒಂದು ವೇಳೆ ಗೆಜಿಯ ಮದುವೆಯಾಗದೇ ಹೋದದ್ದಾರೆ ಕುಷ್ಠವು ಹತ್ತುವುದಕ್ಕೆ ಯಾವ ಸಂತತಿಯವರೂ ಇರುವುದೇ ಇಲ್ಲ ಎಂಬುದು ನೆನಪಿಸತಕ್ಕ ಸಂಗತಿಯಾಗಿದೆ. ಯಾರೋಬ್ಬರೂ ಕುಷ್ಠದವನನ್ನು ಮದುವೆಯಾಗದಲೇ ಇರುವುದರಿಂದ ಇದೂ ಸಹಿತ ಈ ವಿಷಯದಲ್ಲಿ ಸತ್ಯವೇ ಆಗಿರುತ್ತದೆ. [12]Miller, 337. [13]F. W. Krummacher, *Elisha, a Prophet for Our Times* (Grand Rapids, Mich.: Kregel Publications, 1993), 218. [14]ಮಿರ್ಯಾಮಳು ಪಶ್ಚಾತ್ತಾಪಪಟ್ಟಂತೆ ಗೇಹಜಿಯೂ ಕೂಡ ಪಶ್ಚಾತ್ತಾಪಪಟ್ಟನು ಮತ್ತು ಆತನ ಕುಷ್ಠವು ವಾಸಿಯಾಯಿತು (ಅರಣ್ಯಕಾಂಡ 12:10-15) ಒಬ್ಬಲೇಖಕನು ಸೂಚಿಸುತ್ತಾನೆ. ಈ ಸಮಾರೋಪವು ಅಧ್ಯಾಯ 8ರಲ್ಲಿ ಅರಸನ ಮುಂದೆ ಗೆಹೆಜಿಯ ಕಾಣಿಸಿಕೊಳ್ಳುವಿಕೆಯ ಮೇಲೆ ಆಧಾರವಾಗಿವೆ. ಹೇಗೋ, ಇತ್ತಿಚೆಗೆ ಗಮನಿಸಿದಂತೆ 8:1-6ರಲ್ಲಿನ ಘಟನೆಗಳು ಬಹುಶಃ 4:38ರ ಬರಗಾಲಕ್ಕೆ ಸಂಬಂಧಪಟ್ಟಿದೆ ಮತ್ತು ಇದು ನಿಶ್ಚಿತವಾಗಿ ನಾಮಾನನ ಕಥೆಗಿಂತ ಮೊದಲೇ ಕಾಣಿಸಿಕೊಂಡಿದೆ. ಗೇಹಜಿಯು ಎಲೀಷನನ್ನು ಬಿಟ್ಟುಹೊರಟ ನಂತರ ಏನಾದನು ಎಂಬುದರ ಬಗೆಗೆ ಹೇಳಿಲ್ಲ.